## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯಃ ನ.ರಾ.ಪುರ

**ಸಿ.ಸಿ. ನಂಃ *64/2019***

ಫಿರ್ಯಾದುದಾರರು : ಶ್ರೀ. ಬಾಬು ಕೆ.ಪಿ., ಬಿನ್. ಪತ್ರೋಸ್,
45 ವರ್ಷ, ವ್ಯವಸಾಯ ವೃತ್ತಿ, ವಾಸಃ ನಾಗರಹಡ್ಲು,
ಬಿ.ಹೆಚ್. ಕೈಮರ ಅಂಚೆ, ನ.ರಾ.ಪುರ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

:ವಿಃ

ಆರೋಪಿ : ಶ್ರೀ. ಅಭಿಷೇಕ್ ಎ.ಎಸ್., ಬಿನ್. ಸದಾನಂದ ಪೂಜಾರಿ,
35 ವರ್ಷ, ವ್ಯವಸಾಯ ಮತ್ತು ವ್ಯಾಪಾರ ವೃತ್ತಿ,
ವಾಸಃ ಹಿರೇಕೊಡಿಗೆ ಗ್ರಾಮ, ಗಡಿಕಲ್ ಅಂಚೆ,
ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

### ಆ ಪಾ ದ ನೆ

ಆರೋಪಿಯಾದ ನಿಮ್ಮ ವಿರುದ್ಧ ಫಿರ್ಯಾದುದಾರರು ದಾಖಲು ಮಾಡಿರುವ ಫಿರ್ಯಾದು ಏನೆಂದರೆ, ನೀವು ಆರೋಪಿ 27,000/- ರೂ.ಗಳ 14.11.2018 ನೇ ದಿನಾಂಕವನ್ನು ನಮೂದಿಸಿರುವ 322058 ನೇ ಸಂಖ್ಯೆಯ, ಕಾರ್ಪೋರೇಷನ್ ಬ್ಯಾಂಕ್, ಕೊಪ್ಪ ಶಾಖೆಯ ಒಂದು ಚೆಕ್ಕನ್ನು ಫಿರ್ಯಾದುದಾರರಿಗೆ ಕೊಡಬೇಕಾದ ಹಣದ ಬಾಬ್ತು ನಗದೀಕರಣಕ್ಕಾಗಿ ನೀಡಿದ್ದು, ಫಿರ್ಯಾದುದಾರರು ಅದನ್ನು ಜಮಾವಣೆಗಾಗಿ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂಬ ಹಿಂಬರಹದೊಂದಿಗೆ ಅದನ್ನು ವಾಪಾಸು ಮಾಡಿರುತ್ತಾರೆ ಹಾಗೂ ಈ ಬಗ್ಗೆ ನಿಮಗೆ ವಕೀಲರ ಮೂಲಕ ನೋಟೀಸನ್ನು ಕೊಟ್ಟರೂ ಸಹಾ ನೀವು ಆರೋಪಿ ಚೆಕ್ಕಿನಲ್ಲಿ ಒಳಗೊಂಡ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ನೀವು ಆರೋಪಿ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಈ ರೀತಿಯ ಚೆಕ್ಕನ್ನು ನೀಡಿ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

Abhishek AS

ಪ್ರ:1: ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉ :

ತಿಳಿಯಿತು.

ಪ್ರ:2 : ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ :

ವಿಚಾರಣೆಯಾಗಬೇಕು.

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 9 ನೇ ದಿವಸ, ಮಾರ್ಚಿ ಮಾಹೆ, 2026.

Abhishek AS

9/3/26

(ಜೀತು ಆರ್.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ.